Karnatak Law Society's

**Vishwanathrao Deshpande Institute of Technology**

**(Approved by AICTE, New Delhi. Affiliated to VTU, Belagavi)**

**(Recognised Under Section 2(f) by UGC, New Delhi)**

**Udyog Vidya Nagar, Haliyal – 581329, Dist: Uttar Kannada (Karnataka)**

**Phone: 08284-220861, 220334, 221409, Fax: 08284-220813**

**www.klsvdit.edu.in** **principal@klsvdit.edu.in**

Ref: KLS /VDIT/ Date: 09-05-2022

**ಪತ್ರಿಕಾ ಪ್ರಕಟಣೆ:**

## 3ಡಿ ಪ್ರಿಂಟಿಂಗ್ ಕುರಿತು ಕಾರ್ಯಾಗಾರ

ಕೆ.ಎಲ್.ಎಸ್ ವಿ.ಡಿ.ಐ.ಟಿ ಹಳಿಯಾಳದಲ್ಲಿ ಮಾರ್ಚ್ 9 ರಂದು ವಿದ್ಯಾರ್ಥಿಗಳಿಗಾಗಿ 3ಡಿ ಪ್ರಿಂಟಿಂಗ್ ಕುರಿತು ಪ್ರಾಯೋಗಿಕ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಹುಬ್ಬಳ್ಳಿಯ ಶ್ರೀಸಾಯಿ ಟೆಕ್ನಾಲಜಿ ಸೆಂಟರ್‌ನ ಮುಖ್ಯಸ್ಥರಾದ ಶ್ರೀ. ಅನುದೀಪ ವಗ್ಗರ್ ಅವರು ಮಾತನಾಡುತ್ತ 3ಡಿ ಪ್ರಿಂಟಿಂಗ್ ತಂತ್ರಜ್ಞಾನ ಒಂದು ಉದಯೋನ್ಮುಖ ಕ್ಷೇತ್ರವಾಗಿದ್ದು ಯಾವುದೇ ಯಂತ್ರ ಅಥವಾ ಉತ್ಪನ್ನಗಳ ಪ್ರತಿಕೃತಿ ರೂಪಿಸಲು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಈ ಕ್ಷೇತ್ರದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ನುಡಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ 3ಡಿ ಪ್ರಿಂಟಿಂಗ್ ಪ್ರಾಯೋಗಿಕ ಪ್ರಾತ್ಯಕ್ಷಿಕೆ ನೀಡಲಾಯಿತು.

ಮೆಕ್ಯಾನಿಕಲ್ ವಿಭಾಗ ಮುಖ್ಯಸ್ಥರಾದ ಡಾ. ಕೆ. ಎಸ್. ಪೂಜಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಸಂತೋಷ ಸವಣೂರ್ ಸ್ವಾಗತಿಸಿದರು. ಪ್ರೊ. ಗುರುರಾಜ ಹತ್ತಿ ವಂದಿಸಿದರು. ಡಾ. ಶೈಲೇಷ ಚನ್ನಪಟ್ಟಣ ಮತ್ತು ಎಲ್ಲ ಬೋಧಕ ಸಿಬ್ಬಂದಿಗಳು ಉಪಸ್ಥಿತರಿದ್ದರು. ಮೆಕ್ಯಾನಿಕಲ್ 6ನೇ ಸೆಮಿಸ್ಟರ್‌ನ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ತರಬೇತಿ ಪಡೆದುಕೊಂಡರು ಎಂದು ಪ್ರಾಂಶುಪಾಲರಾದ ಡಾ. ವಿ. ಎ. ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal

